ಮಹಿಳೆಯರು ಹಾಗೂ ಕಿಶೋರಿಯರಲ್ಲಿ ಕಬ್ಬಿಣಾಂಶ ಕೊರತೆ ತಡೆಗಟ್ಟುವುದಕ್ಕಾಗಿ ಪೌಷ್ಟಿಕಾಂಶ ತರಬೇತಿ ಕಾರ್ಯಗಾರ



ದಿನಾಂಕ 22 ಮತ್ತು 23 ಸೆಪ್ಟೆಂಬರ್ 2017 ಕ್ಕೆ ಐಸಿಎಆರ್– ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಹಾಗೂ "ಸೇವಕ" ಸ್ವಯಂ ಸೇವಾ ಸಂಸ್ಥೆ, ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಮಹಿಳೆಯರು ಹಾಗೂ ಕಿಶೋರಿಯರಲ್ಲಿ ಕಬ್ಬಿಣಾಂಶದ ಕೊರತೆ ತಡೆಗಟ್ಟುವುದಕ್ಕಾಗಿ ಎರಡು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಗುತ್ತಿ ಜಂಬುನಾಥ, ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ನೆರವೇರಿಸಿ, ಮಹಿಳೆಯರಲ್ಲಿ ಕಬ್ಬಿಣಾಂಶ ಕೊರತೆ, ರಕ್ತಹೀನತೆ ಹೆಚ್ಚಾಗಿ ಕಂಡುಬರುತ್ತಿದ್ದು ಅಗತ್ಯ ಪೋಷಕಾಂಶ ನೀಡುವ ಜೊತೆಗೆ ಮೂಢನಂಬಿಕೆ ಹೋಗಲಾಡಿಸಲು ಜಾಗೃತಿ ಮೂಡಿಸಬೇಕಿದೆ ಎಂದು ನುಡಿದರು. ಮಹಿಳೆ ಆರೋಗ್ಯವಂತಳಾದರೆ ಆಕೆಯಿಂದ ಆರೋಗ್ಯವಂತ ಕುಟುಂಬ ಹಾಗೂ ಸದೃಢ ಸಮಾಜ ನಿರ್ಮಾಣ ಸಾಧ್ಯ ಎಂದರು. ಬೆಳಗಾವಿ ಸೇವಕ ಸ್ವಯಂ ಸೇವಾ ಸಂಸ್ಥೆಯ ಮುಖ್ಯ ಸಂಯೋಜಕರಾದ ಡಾ. ಆನಂದ ಲೋಟೋ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಕಬ್ಬಿಣಾಂಶ ಕೊರತೆಯಿಂದ ಅನೇಕ ಗರ್ಭಿಣಿಯರು ಹಾಗೂ ಬಾಣಂತಿಯರು ರಕ್ತಹೀನತೆಯಿಂದ ತೊಂದರೆಗಳಿಗೆ ಮತ್ತು ರೋಗಗಳಿಗೆ ತುತ್ತಾಗುತ್ತಿದ್ದಾರೆ ಎಂದರು. ಕಾರಟಗಿಯ ಪಾರ್ವತಮ್ಮ ಎನ್‌ಜಿಒ ಮುಖ್ಯಸ್ಥೆ ಡಾ.ಶಿಲ್ಪಾ ಬಿರಾದಾರ ಮಾತನಾಡಿ, ಈ ರೀತಿಯ ಕಾರ್ಯಕ್ರಮಗಳು ಮಹಿಳೆಯರ ಆರೋಗ್ಯ ನಿರ್ವಹಣೆಗೆ ಬಹಳ ಉಪಯುಕ್ತ ಎಂದರು. ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿಸ್ತರಣಾ ನಿರ್ದೇಶಕರಾದ ಡಾ. ಎಸ್. ಕೆ. ಮೇಟಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಮಹಿಳೆಯರಲ್ಲಿ ಪೋಷಕಾಂಶಗಳ ಕೊರತೆ ನೀಗಿದಾಗ ಮಾತ್ರ ದೇಶದಲ್ಲಿ ಬಡತನ ನಿರ್ಮೂಲನೆ ಸಾಧ್ಯ ಎಂದು ಹೇಳಿದರು.ಡಾ. ಎಂ. ವಿ. ರವಿ ಎಲ್ಲರನ್ನೂ ಸ್ವಾಗತಿಸಿದರು ಮತ್ತು ಡಾ. ಅನುಪಮ ಸಿ., ವಂದಿಸಿದರು. ಡಾ. ಪ್ರಹ್ಲಾದ ಉಭಾಳೆ, ಶ್ರೀ. ಪಿ. ಆರ್. ಬದರಿ ಪ್ರಸಾದ್, ಶ್ರೀಮತಿ ಬಿ.ಎನ್. ಶ್ವೇತಾ ಮತ್ತು ಶ್ರೀಮತಿ ಕೆ. ಜೆ. ಹೇಮಲತಾ ಇವರು ಉಪಸ್ಥಿತರಿದ್ದರು.

ವಿಸ್ತರಣಾ ಚಟುವಟಿಕೆಗಳು

ನವಣೆ ಬೆಳೆ(HMT 100-1) ಯ ಕ್ಷೇತ್ರೋತ್ಸವ







ದಿನಾಂಕ 13.09.2017 ರಂದು ಮಿಡಗಲದಿನ್ನಿ ಗ್ರಾಮದ ರೈತ ಶ್ರೀ.ಗೋವಿಂದ ತಂದೆ ಶ್ರೀ ವೆಂಕಟೇಶ ಇವರ ಹೊಲದಲ್ಲಿ ನವಣೆ ಬೆಳೆಯ ಕ್ಷೇತ್ರೋತ್ಸವವನ್ನು ನೆರವೇರಿಸಲಾಯಿತು. ಐಸಿಎಆರ್– ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಂ.ವಿ. ರವಿಯವರು ಮಾತನಾಡಿ ನವಣೆ ಬೆಳೆಯು ಮಳೆಯಾಶ್ರಿತ ಭೂಮಿಗೆ ಸೂಕ್ತ ಬೆಳೆಯಾಗಿದೆ ಮತ್ತು ಸುಧಾರಿತ **HMT 100–1** ನವಣೆ ತಳಿಯು ಹೆಚ್ಚಿನ ಇಳುವರಿ ಕೊಡುವುದರಿಂದ ರೈತರು ಇದನ್ನು ಹೆಚ್ಚು ಬೆಳೆಯಬಹುದೆಂದರು.

ಡಾ. ಅನುಪಮ ಸಿ., ನವಣೆಯ ಮಹತ್ವ ಮತ್ತು ಮೌಲ್ಯವರ್ಧನೆ ಕುರಿತು ಮಾತನಾಡಿದರು. ಶ್ರೀಮತಿ ಬಿ. ಎನ್.ಶ್ವೇತಾ ಅವರು ನವಣೆಯ ಸುಧಾರಿತ ಬೇಸಾಯ ಕ್ರಮಗಳ ಕುರಿತು ಮಾತನಾಡಿದರು. ಶ್ರೀ ಪಿ. ಆರ್. ಬದರಿ ಪ್ರಸಾದ್ ಅವರು ಕೀಟ ರೋಗಗಳ ಬಾಧೆ ನಿರ್ವಹಿಸುವ ಕ್ರಮಗಳನ್ನು ವಿವರಿಸಿದರು. ಡಾ. ಪ್ರಹ್ಲಾದ್ ಉಭಾಳೆ ಅವರು ನವಣೆಯ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಅವಕಾಶಗಳ ಕುರಿತು ಮಾತನಾಡಿದರು. ಶ್ರೀಮತಿ ಕೆ. ಜೆ. ಹೇಮಲತಾ ಅವರು ಉಪಸ್ಥಿತರಿದ್ದರು. ಸುತ್ತಮುತ್ತಲಿನ ಗ್ರಾಮಗಳ ಸುಮಾರು 40 ಜನ ರೈತರು ಇದರ ಪ್ರಯೋಜನ ಪಡೆದರು.

ಆಕಾಶವಾಣಿ ಕಾರ್ಯಕ್ರಮಗಳು

ಕ್ರ. ಸಂ.	ಶೀರ್ಷಿಕೆ	ದಿನಾಂಕ	ವಿಜ್ಞಾನಿಯ ಹೆಸರು
1	ಅಣಬೆ ಬೇಸಾಯ ಮತ್ತು ಪ್ರಾಮುಖ್ಯತೆ	28.07.2017.	ಡಾ. ಅನುಪಮ ಸಿ.
2	ಹತ್ತಿ ಬೆಳೆಯಲ್ಲಿ ಗುಲಾಬಿ ಕಾಯಿ ಕೊರಕದ ನಿರ್ವಹಣೆ	30.07.2017	ಶ್ರೀ. ಪಿ. ಆರ್. ಬದರಿಪ್ರಸಾದ್
3	ಮೆಣಸಿನಕಾಯಿ ಬೆಳೆಯಲ್ಲಿ ಸಮಗ್ರ ಬೇಸಾಯ ಕ್ರಮಗಳು	30.07.2017	ಶ್ರೀಮತಿ ಕೆ. ಜೆ. ಹೇಮಲತಾ
4	ಸಮಗ್ರ ಕೃಷಿ ಪದ್ಧತಿಯಲ್ಲಿ ಜೇನು ಸಾಕಾಣಿಕೆ	02.08.2017	ಶ್ರೀ. ಪಿ. ಆರ್. ಬದರಿಪ್ರಸಾದ್
5	ರೈತರ ಆದಾಯ ದ್ವಿಗುಣಗೊಳಿಸುವುದು	07.08.2017	ಡಾ. ಎಂ. ವಿ. ರವಿ
6	ಜೇನು ಕೃಷಿ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ	19.08.2017	ಶ್ರೀ. ಪಿ. ಆರ್. ಬದರಿಪ್ರಸಾದ್
7	ಶಿಶು ಆಹಾರದ ಮಹತ್ವ	06.09.2017	ಡಾ. ಅನುಪಮ ಸಿ.
8	ಪಾರ್ಥೇನಿಯಂ ಹತೋಟಿ ಕ್ರಮಗಳು	07.09.2017	ಶ್ರೀಮತಿ ಬಿ. ಎನ್.ಶ್ವೇತಾ

ದೂರದರ್ಶನ ಕಾರ್ಯಕ್ರಮಗಳು

ಕ್ರ. ಸಂ.	ಶೀರ್ಷಿಕೆ	ದಿನಾಂಕ	ವಿಜ್ಞಾನಿಯ ಹೆಸರು
1	ರೈತರ ಆದಾಯ ದ್ವಿಗುಣಗೊಳಿಸುವುದು	09.08.2017	ಡಾ. ಎಂ. ವಿ. ರವಿ
2	ಹತ್ತಿ ಬೆಳೆಯಲ್ಲಿ ಗುಲಾಬಿ ಕಾಯಿ ಕೊರಕದ ನಿರ್ವಹಣೆ	18.08.2017	ಶ್ರೀ. ಪಿ. ಆರ್. ಬದರಿಪ್ರಸಾದ್
3	ಬರಗು ಬೆಳೆಯ ಮಹತ್ವ ಮತ್ತು ಮೌಲ್ಯವರ್ಧನೆ	22.08.2017	ಡಾ. ಅನುಪಮ ಸಿ.
4	ಮೆಣಸಿನಕಾಯಿ ಬೆಳೆಯಲ್ಲಿ ಕೀಟ ಬಾಧೆ ನಿರ್ವಹಣೆ	23.08.2017	ಶ್ರೀ. ಪಿ. ಆರ್. ಬದರಿಪ್ರಸಾದ್
5	ಬರಗು ಬೆಳೆ ಪ್ರಾಮುಖ್ಯತೆ ಮತ್ತು ಮೌಲ್ಯವರ್ಧನೆ	25.08.2017	ಡಾ. ಅನುಪಮ ಸಿ.
6	ವಿಶ್ವ ಜೇನುಹುಳು ದಿನಾಚರಣೆಯ ವರದಿ	30.08.2017	ಶ್ರೀ. ಪಿ. ಆರ್. ಬದರಿಪ್ರಸಾದ್

ಪ್ರಶಸ್ತಿಗಳು ಮತ್ತು ಪುರಸ್ಕಾರಗಳು



ಶ್ರೀ ಪಿ.ಆರ್. ಬದರಿ ಪ್ರಸಾದ್, ವಿಜ್ಞಾನಿ (ಕೃಷಿ ಕೀಟ ಶಾಸ್ತ್ರ) ಇವರ ಕೀಟ ಶಾಸ್ತ್ರ ವಿಭಾಗದಲ್ಲಿನ ಕೊಡುಗೆಗಳನ್ನು ಪರಿಗಣಿಸಿ

"Science and Tech Society for Integrated Rural Improvement" ಮಹಬೂಬಾಬಾದ, ತೆಲಂಗಾಣ ಇವರು ಯುವ ವಿಜ್ಞಾನಿ ಪ್ರಶಸ್ತಿ (Young Scientist Award) ಯನ್ನು ದಿನಾಂಕ 09 ರಿಂದ 10 ಸೆಪ್ಟೆಂಬರ್ 2017 ರಂದು ನಡೆದ ವಿಶಾ-2017 ಕಾರ್ಯಕ್ರಮದಲ್ಲಿ

ಪ್ರಧಾನ ಸಂಪಾದಕರು : ಡಾ. ಎಂ. ವಿ. ರವಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ಸಂಪಾದಕರು : ಶ್ರೀ ಬದರಿ ಪ್ರಸಾದ್ ಪಿ. ಆರ್. ವಿಜ್ಞಾನಿ (ಕೃಷಿ ಕೀಟ ಶಾಸ್ತ್ರ)
ಡಾ. ಅನುಪಮ ಸಿ. ವಿಜ್ಞಾನಿ (ಗೃಹ ವಿಜ್ಞಾನ)
ಶ್ರೀಮತಿ ಶ್ವೇತಾ ಬಿ. ಎನ್. ವಿಜ್ಞಾನಿ (ಬೇಸಾಯ ಶಾಸ್ತ್ರ)
ಶ್ರೀಮತಿ ಕೆ.ಜೆ. ಹೇಮಲತಾ ವಿಜ್ಞಾನಿ (ತೋಟಗಾರಿಕೆ)

ಪುಟ ವಿನ್ಯಾಸ ಮತ್ತು ಅಕ್ಷರ ಜೋಡಣೆ :
ಶ್ರೀ. ದೇವರಾಜ್ ನಾಯಕ, ಕಾರ್ಯಕ್ರಮ ಸಹಾಯಕ (ಗಣಕಯಂತ್ರ) ಮತ್ತು ಕುಮಾರಿ ಶಿಲ್ಪಾ

ಇವರಿಂದ

ತೆರೆದ–ಅಂಚೆ

ಗೆ,

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
kvkraichur@gamil.com, kvkraichur@icar.gov.in
pckvkraichur@uasraichur.edu.in
www.kvkraichur.com

www.kvkraichur.com
email : kvkraichur@gmail.com
kvk.raichur@icar.gov.in

ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ತ್ರೈಮಾಸಿಕ ವಾರ್ತಾಪತ್ರ

ಸಂಪುಟ : 16 | ಜುಲೈ- ಸೆಪ್ಟಂಬರ್ | ಸಂಚಿಕೆ: 2

ಒಳ ಪುಟಗಳಲ್ಲಿ :

- ನವಭಾರತ ಮಂಥನ : ಸಂಕಲ್ಪದಿಂದ ಸಿದ್ಧಿ (2017-2022) "ರೈತರ ಆದಾಯವನ್ನು ದ್ವಿಗುಣಗೊಳಿಸುವ ಏಳು ಅಂಶಗಳ ಕಾರ್ಯಕ್ರಮದ ಚಾಲನೆ"
- "ವಿಶ್ವ ಜೇನುಹುಳು ದಿನಾಚರಣೆ ಮತ್ತು ರೈತರ ಆದಾಯ ದ್ವಿಗುಣಗೊಳಿಸುವ ತಾಂತ್ರಿಕತೆಗಳು"
- ತೋಟಗಾರಿಕೆ ದಿನಾಚರಣೆ
- "ರಾಜ್ಯ ಮಟ್ಟದ ಡಾ॥ ಜಿ.ಕೆ. ವೀರೇಶ್ ಎಂಡೋಮೆಂಟ್ ಪ್ರಶಸ್ತಿ" ಹಿನ್ನೆಲೆಯಲ್ಲಿ "ಸಮಗ್ರ ಕೃಷಿ ಪದ್ಧತಿಯ ಕ್ಷೇತ್ರೋತ್ಸವ"
- "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಪ್ರಾಯೋಗಿಕ ಯೋಜನೆ
- ಪಾರ್ಥೇನಿಯಂ ನಿರ್ಮೂಲನಾ ದಿನಾಚರಣೆ
- ಮಹಿಳೆಯರು ಹಾಗೂ ಕಿಶೋರಿಯರಲ್ಲಿ ಕಬ್ಬಿಣಾಂಶ ಕೊರತೆ ತಡೆಗಟ್ಟುವುದಕ್ಕಾಗಿ ಪೌಷ್ಟಿಕಾಂಶ ತರಬೇತಿ ಕಾರ್ಯಾಗಾರ
- ವಿಸ್ತರಣಾ ಚಟುವಟಿಕೆಗಳು
- ಪ್ರಶಸ್ತಿ ಮತ್ತು ಪುರಸ್ಕಾರ

ಆತ್ಮೀಯರೆ,

ಸತತ ಬರಗಾಲದಿಂದ ಬಳಲಿ ಬೆಂಡಾಗಿದ್ದ ರಾಯಚೂರು ಜಿಲ್ಲೆಯು ಸುರಿದ ಅಕಾಲಿಕ ಮಳೆಯಿಂದಾಗಿ ಎಲ್ಲಾ ಹಳ್ಳ ಕೊಳ್ಳಗಳು ತುಂಬಿ ಭೂಮಿಯು ಹಸಿರಿನಿಂದ ಆವೃತಗೊಂಡಿದ್ದು ನೋಡುವವರ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದೆ. ಇಂತ ಸಂದರ್ಭದಲ್ಲಿ ಪ್ರಕೃತಿಯೆಲ್ಲೆಡೆ ಹಚ್ಚ ಹಸಿರಿನ ಸಂಭ್ರಮ ಸಡಗರಗಳು ನೋಡುವ ಕಣ್ಣುಗಳಿಗೆ ತೃಪ್ತಿ ಹಾಗೂ ಸಮಾಧಾನ ನೀಡಿ, ಒಕ್ಕಲಿಗನೆದೆಯಲ್ಲಿ ಪುಳಕವನ್ನುಂಟುಮಾಡುವುದಲ್ಲದೆ ತನ್ನ ಕಷ್ಟಗಳು ದೂರವಾದವೆಂಬ ಧನ್ಯತೆಯ ಭಾವ ಕಾಣುತ್ತದೆ. ಸಕಾಲಕ್ಕಾಗದಿದ್ದರೂ ಆಪತ್ಕಾಲದಲ್ಲಿ ಸುರಿದ ಮಳೆಯಿಂದಾಗಿ ಭೂದೇವಿಯ ಹಸಿರು ಸಂಭ್ರಮವನ್ನು ನೋಡಲು ಇನ್ನೆರಡು ಕಣ್ಣುಗಳಿದ್ದರೆ ಚೆನ್ನವೆಂಬ ಆಸೆಯುಂಟಾಗುತ್ತದೆ. ಪ್ರಕೃತಿಯ ಈ ಚೈತನ್ಯದ ಪೂಜೆಗೆ ಕೊನೆಯೆಂಬುದೆಲ್ಲಿದೆ ಹೇಳಿ. ಇಂತಹ ಸಂದರ್ಭದಲ್ಲಿ ಜಿಲ್ಲೆಯ ಹಲವೆಡೆ ಸುರಿದ ಅಕಾಲಿಕ ಮಳೆಯಿಂದಾಗಿ ಬಿತ್ತಿದ ಬೀಜಗಳು ಕೈ ಸೇರುವುದೋ ಇಲ್ಲವೋ ಎಂಬ ಆಂತಕದಲ್ಲಿ ರೈತಬಾಂಧವರಿದ್ದಾರೆ. ಇವರಿಗೆ ಆತ್ಮಸ್ಥೈರ್ಯವನ್ನು ಉಂಟುಮಾಡಲು ಕೃಷಿ ವಿಜ್ಞಾನ ಕೇಂದ್ರವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ರೈತರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ.

ಮಳೆ ಬಂದರೆ ಕೇಡಿಲ್ಲ, ಮಗಳುಂಡರೆ ಕೇಡಿಲ್ಲ ಎಂಬ ನಾಣ್ನುಡಿಯಂತೆ ಬಿದ್ದಿರುವ ಮಳೆ ನೀರನ್ನು ಸಂಗ್ರಹಿಸಿಟ್ಟುಕೊಂಡು ಹಿಂಗಾರಿ ಬೆಳೆಗಳಿಗೆ ಉಣಿಸಿ ಉತ್ತಮ ಇಳುವರಿಯನ್ನು ಪಡೆದು ಉತ್ಪಾದನೆ ಹೆಚ್ಚಿಸಿ ಆದಾಯ ದ್ವಿಗುಣಗೊಳಿಸುವತ್ತ ಹೆಜ್ಜೆ ಹಾಕೋಣ ಎಂಬ ಹಾರೈಕೆಯೊಂದಿಗೆ.

ಇಂತಿ ತಮ್ಮ ನಂಬುಗೆಯ

ಡಾ. ಎಂ. ವಿ. ರವಿ

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ನವಭಾರತ ಮಂಥನ : ಸಂಕಲ್ಪದಿಂದ ಸಿದ್ಧಿ (2017-2022)
"ರೈತರ ಆದಾಯವನ್ನು ದ್ವಿಗುಣಗೊಳಿಸುವ ಏಳು ಅಂಶಗಳ ಕಾರ್ಯಕ್ರಮದ ಚಾಲನೆ"

ಕೃಷಿ ಹಾಗೂ ರೈತರ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಮತ್ತು ಕೃಷಿ ಇಲಾಖೆ, ರಾಯಚೂರು ಇವರ ಸಹಯೋಗದಲ್ಲಿ ನವಭಾರತ ಮಂಥನ : ಸಂಕಲ್ಪದಿಂದ ಸಿದ್ಧಿ (2017–2022) "ರೈತರ ಆದಾಯವನ್ನು ದ್ವಿಗುಣಗೊಳಿಸುವ ಏಳು ಅಂಶಗಳ ಕಾರ್ಯಕ್ರಮದ ಚಾಲನೆ"ಯನ್ನು ದಿನಾಂಕ 09.09.2017 ರಂದು ಕೃಷಿ ವಿಶ್ವವಿದ್ಯಾಲಯದ ಶ್ರೇಕ್ಷಾಗೃಹದಲ್ಲಿ ಏರ್ಪಡಿಸಲಾಗಿತ್ತು. ಕೃಷಿ ಕ್ಷೇತ್ರ ಸಾಕಷ್ಟು ಅತಂತ್ರದಲ್ಲಿದ್ದು, ಸರ್ಕಾರಗಳು ಕಾರ್ಪೋರೇಟ್ ಕ್ಷೇತ್ರಕ್ಕೆ ನೀಡುತ್ತಿರುವಂತಹ ಸೌಲಭ್ಯಗಳು ಕೃಷಿ ಕ್ಷೇತ್ರಕ್ಕೂ ಸಿಕ್ಕಲ್ಲಿ ರೈತರ ಬದುಕು ಹಸನಾಗಲಿದೆ ಎಂದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ನಗರದ ಕ್ಷೇತ್ರ ಶಾಸಕ ಡಾ. ಶಿವರಾಜ ಪಾಟೀಲ್, ಎಸ್., ಅಭಿಪ್ರಾಯಪಟ್ಟರು. ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕರಾದ ಡಾ.ಬಿ. ಶಂಕರಗೌಡ ರವರು ಮಳೆಯಾಶ್ರಿತ ರೈತರ ಆದಾಯ ತುಂಬಾ ಕ್ಷೀಣಿಸಿ ಕೃಷಿ ಆದಾಯ ಪ್ರಸ್ತುತ ಸ್ಥಿತಿಯಲ್ಲಿ ಯಾವುದಕ್ಕೂ ಸಾಲುತ್ತಿಲ್ಲವೆಂದು ಅಭಿಪ್ರಾಯಪಟ್ಟರು. ಕೇಂದ್ರ ಸರ್ಕಾರ 2017 ರಿಂದ 2022 ರ ವರೆಗೆ ಐದು ವರ್ಷಗಳಲ್ಲಿ ರೈತರ ಆದಾಯ ದ್ವಿಗುಣಗೊಳಿಸಲು ಏಳು ಅಂಶಗಳ ಕಾರ್ಯಕ್ರಮ ರೂಪಿಸಿದೆ ಎಂದು ಹೇಳಿದರು ಹಾಗೂ ಈ ಅಂಶಗಳನ್ನು ಅಳವಡಿಸಿಕೊಳ್ಳುವ ಕ್ರಮಗಳನ್ನು ಕುರಿತು ವಿಶೇಷ ಉಪನ್ಯಾಸ ನೀಡಿದರು. ರೈತರ ಆದಾಯವನ್ನು

ಕಾಪಾಡುವುದರ ಮೂಲಕ ಉತ್ಪಾದಕತೆ ಹೆಚ್ಚಿಸಬಹುದೆಂದು ಅಭಿಪ್ರಾಯಪಟ್ಟರು. ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ಎಸ್. ಬೋಸರಾಜು ಮಾತನಾಡಿ ಕೊಯ್ತೋತ್ತರ ನಷ್ಟವನ್ನು ಕಡಿಮೆ ಮಾಡಲು ಗೋದಾಮು ಹಾಗೂ ಶೀತಲ ಗೃಹ ಸೌಲಭ್ಯವನ್ನು ಬಲಪಡಿಸುವುದು, ಆಹಾರ ಸಂಸ್ಕರಣೆಯ ಮುಖಾಂತರ ಕೃಷಿ ಉತ್ಪಾದನೆಯ ಮೌಲ್ಯವರ್ಧನೆ ಮಾಡುವುದು ಅತ್ಯಂತ ಅವಶ್ಯಕ ಎಂದು ತಿಳಿಸಿದರು. ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶ್ರೀ ಅಮರೇಶ್ ಬಲ್ಲಿದವ ಮಾತನಾಡಿ ರೈತರ ಆದಾಯ ದ್ವಿಗುಣಗೊಳಿಸುವುದಕ್ಕಾಗಿ ಉತ್ಪಾದನಾ ವೆಚ್ಚ ಕಡಿಮೆಗೊಳಿಸುವುದು, ಉತ್ಪಾದಕತೆ ಹೆಚ್ಚಿಸುವುದು, ಸೂಕ್ತ ಮಾರುಕಟ್ಟೆ ಬೆಲೆ ನಿಗದಿ ಪಡಿಸುವುದು, ಕೃಷಿ ಯಾಂತ್ರೀಕರಣ, ರೈತರಿಗೆ ಕೃಷಿಯ ವಿವಿಧ ಮೂಲಗಳಿಂದ ಆದಾಯ ಬರುವಂತೆ ಮಾಡುವುದು ಅವಶ್ಯಕತೆಯಾಗಿರುತ್ತದೆ ಎಂದು ತಿಳಿಸಿದರು. ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ. ಪಿ. ಎಂ. ಸಾಲಿಮಠ ಮಾತನಾಡಿ, ಕೇಂದ್ರ ಸರ್ಕಾರ ರೂಪಿಸಿರುವ ನವಭಾರತ ಮಂಥನ: ಸಂಕಲ್ಪದಿಂದ ಸಿದ್ಧಿ ಕಾರ್ಯಕ್ರಮದ ಬಗ್ಗೆ ಸರಿಯಾಗಿ ತಿಳಿಯಬೇಕು ಹಾಗೂ ರೈತರು ಎದುರಿಸುವ ಸವಾಲುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುತ್ತ ನವಭಾರತದ ಕಡೆ ಹೆಜ್ಜೆ ಹಾಕಬೇಕೆಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಆದಿಮನಿ ವೀರಲಕ್ಷ್ಮೀ, ಕೃಷಿಕ ಸಮಾಜ ಅಧ್ಯಕ್ಷ ಶ್ರೀ ಎಸ್. ಬಿ, ಪಾಟೀಲ, ಕೃಷಿ ವಿಶ್ವವಿದ್ಯಾಲಯ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ರಾಜಶೇಖರ ಪಾಟೀಲ, ಸಿದ್ದಯ್ಯ ಭಂಡಾರಿ, ಕೃಷಿ ವಿಸ್ತರಣಾ ನಿರ್ದೇಶಕರಾದ ಡಾ.ಎಸ್.ಕೆ.ಮೇಟಿ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಂ.ವಿ. ರವಿ, ಜಂಟಿ ಕೃಷಿ ನಿರ್ದೇಶಕರಾದ ಡಾ. ಎಂ. ಕಿರಣಕುಮಾರ್ ಮತ್ತು 850 ಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.





"ವಿಶ್ವ ಜೇನುಹುಳು ದಿನಾಚರಣೆ ಮತ್ತು ರೈತರ ಆದಾಯ ದ್ವಿಗುಣಗೊಳಿಸುವ ತಾಂತ್ರಿಕತೆಗಳು"

ವಿಶ್ವ ಜೇನುಹುಳು ದಿನಾಚರಣೆ ಅಂಗವಾಗಿ ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನಲ್ಲಿ ದಿನಾಂಕ 19.08.2017 ರಂದು ವಿಶ್ವ ಜೇನುಹುಳು ದಿನಾಚರಣೆ ಹಾಗೂ ರೈತರ ಆದಾಯ ದ್ವಿಗುಣಗೊಳಿಸುವ ತಾಂತ್ರಿಕತೆಗಳು ಕುರಿತು ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಕೇಂದ್ರದ ಕೀಟ ತಜ್ಞರಾದ ಶ್ರೀ ಪಿ.ಆರ್. ಬದರಿಪ್ರಸಾದ್ ಪ್ರಾಸ್ತಾವಿಕ ಭಾಷಣ ಮಾಡಿ, ಅಲ್ಬರ್ಟ್ ಐನ್‌ಸ್ಟೀನ್ ಅವರು ಹೇಳಿರುವಂತೆ ಒಂದು ವೇಳೆ ಈ ಭೂಮಿಯಿಂದ ಜೇನು ಹುಳು ಸಂತತಿ ನಾಶವಾದರೆ ಮುಂದಿನ ನಾಲ್ಕು ವರ್ಷಗಳಲ್ಲಿ ಇಡೀ ಮಾನವ ಕುಲವೇ ಅಳಿದುಹೋಗುತ್ತದೆ ಎಂದು ಎಚ್ಚರಿಸಿದರು. ಡಾ. ಎಸ್.ಕೆ. ಮೇಟಿ, ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಮಗ್ರ ಕೃಷಿ ಪದ್ಧತಿಯಲ್ಲಿ ಜೇನು ಕೃಷಿಯ ಪ್ರಾಮುಖ್ಯತೆ, ಆರ್ಥಿಕತೆ ಹಾಗೂ ಇತರ ಪ್ರಯೋಜನಗಳ ಬಗ್ಗೆ ರೈತರಿಗೆ ತಿಳಿಹೇಳಿದರು. ಪ್ರತಿಯೊಬ್ಬರು ಜೇನು ಕೃಷಿಯನ್ನು ಕೈಗೊಂಡು ಹೆಚ್ಚಿನ ಲಾಭ ಪಡೆದು ತಮ್ಮ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳಬೇಕೆಂದು ಕರೆನೀಡಿದರು. ಜೇನು ಸಾಕಾಣಿಕೆಯ ಪ್ರಾಮುಖ್ಯತೆ, ಜೇನು ಕೃಷಿ ಮಾಡುವ ವಿಧಾನಗಳು ಹಾಗೂ ಅಗತ್ಯ ಉಪಕರಣಗಳು, ಜೇನು ಸಾಕಾಣಿಕೆಗೆ ಪೂರಕವಾದ ತೋಟಗಾರಿಕೆ ಬೆಳೆಗಳು, ಆದಾಯ ದ್ವಿಗುಣಗೊಳಿಸುವ ಸಮಗ್ರ ಕೃಷಿ ತಾಂತ್ರಿಕತೆಗಳು, ಆದಾಯ ಹೆಚ್ಚಿಸುವ ಮೌಲ್ಯವರ್ಧನೆ ತಾಂತ್ರಿಕತೆಗಳು ಮತ್ತು ಸಮಗ್ರ ಕೃಷಿ ಪದ್ಧತಿಯಲ್ಲಿ ಪಶುಪಾಲನೆ ವಿಷಯಗಳ ಬಗ್ಗೆ ತರಬೇತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಡಾ.ಪ್ರಮೋದ ಕಟ್ಟಿ, ಸಂಪಾದಕರು, ಪ್ರಕಟಣಾ ವಿಭಾಗ, ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಡಾ. ಎ. ಪ್ರಭುರಾಜ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ಕೀಟ ಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ರಾಯಚೂರು, ಡಾ. ಎ. ಜಿ. ಶ್ರೀನಿವಾಸ ಪ್ರಾಧ್ಯಾಪಕರು ಕೃಷಿ ಕೀಟಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ರಾಯಚೂರು ಮತ್ತು ಶ್ರೀ ಎಸ್. ಎಮ್. ಸಿದ್ಧರೆಡ್ಡಿ, ಅಧ್ಯಕ್ಷರು, ಕೃಷಿ ತಂತ್ರಜ್ಞರ ಸಂಸ್ಥೆ, ರಾಯಚೂರು ಇವರು ಭಾಗವಹಿಸಿ ರೈತರಿಗೆ ಜೇನು ಕೃಷಿಯ ಲಾಭಗಳನ್ನು ಅರಿತು ಜೇನು ಸಾಕಾಣಿಕೆಯಲ್ಲಿ ತೊಡಗಿಸಿಕೊಳ್ಳಲು ಕರೆನೀಡಿದರು. ಡಾ. ಎಂ.ವಿ.ರವಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಇವರು ಸ್ವಾಗತ ಭಾಷಣ ಮಾಡಿದರು ಮತ್ತು ಡಾ. ಅನುಪಮ ಸಿ. ವಂದಿಸಿದರು. ಕೇಂದ್ರದ ವಿಜ್ಞಾನಿಗಳಾದ ಡಾ. ಬಿ.ಕೆ.ರಮೇಶ, ಶ್ರೀಮತಿ ಕೆ.ಜೆ. ಹೇಮಲತಾ ಮತ್ತು ಡಾ.ಸಂಗಣ್ಣ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ತರಬೇತಿಯಲ್ಲಿ 120 ಕ್ಕೂ ಹೆಚ್ಚು ರೈತರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.





ತೋಟಗಾರಿಕೆ ದಿನಾಚರಣೆ

ದಿನಾಂಕ 08.08.2017 ರಂದು ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಮತ್ತು ತೋಟಗಾರಿಕೆ ಇಲಾಖೆ, ರಾಯಚೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಮಾನ್ವಿ ತಾಲೂಕಿನ ಜಕ್ಕಲದಿನ್ನಿ ಗ್ರಾಮದಲ್ಲಿ ತೋಟಗಾರಿಕೆ ದಿನಾಚರಣೆ ಹಾಗೂ ಗೇರು ಬೆಳೆಯ ಬೇಸಾಯ ಕುರಿತು ತರಬೇತಿಯನ್ನು ಏರ್ಪಡಿಸಲಾಯಿತು. ತೋಟಗಾರಿಕೆ ಉಪ ನಿರ್ದೇಶಕರಾದ ಶ್ರೀ ಸಂತೋಷ್ ಇನಾಂದಾರ್ ಅವರು ತೋಟಗಾರಿಕೆ ಮಹತ್ವ ಹಾಗೂ ತೋಟಗಾರಿಕೆ ಬೆಳೆಗಳ ಪ್ರಾಮುಖ್ಯತೆ ಕುರಿತು ಮಾತನಾಡಿದರು. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀ ವಿರುಪಾಕ್ಷಪ್ಪ ಅವರು ಈ ಭಾಗದಲ್ಲಿ ಬೆಳೆಯಬಹುದಾದ ಪ್ರಮುಖ ಹಣ್ಣಿನ ಬೆಳೆಗಳು ಹಾಗೂ ಇಲಾಖೆಯಿಂದ ದೊರೆಯವ ಸೌಲಭ್ಯಗಳ ಕುರಿತು ಮನವರಿಕೆ ಮಾಡಿಕೊಟ್ಟರು. ಕೃಷಿ ವಿಜ್ಞಾನ ಕೇಂದ್ರದ ಶ್ರೀಮತಿ ಕೆ.ಜೆ. ಹೇಮಲತಾ, ವಿಜ್ಞಾನಿ (ತೋಟಗಾರಿಕೆ) ಇವರು ಗೇರು ಬೆಳೆಯ ಬೇಸಾಯ ಕುರಿತು ಉಪನ್ಯಾಸ ನೀಡಿದರು. ಡಾ. ಬಿ.ಕೆ ರಮೇಶ್ ವಿಜ್ಞಾನಿ (ಪಶು ವಿಜ್ಞಾನ) ಇವರು ಸಮಗ್ರ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆಯೊಂದಿಗೆ ಪಶುಪಾಲನೆಯನ್ನು ಅಳವಡಿಸಿಕೊಳ್ಳುವ ಕುರಿತು ಮಾಹಿತಿ ನೀಡಿದರು. ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ನಜೀರ್ ಅಹಮದ್ ಅವರು ಕೃಷಿ ಇಲಾಖೆಯಲ್ಲಿ ರೈತರಿಗೆ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರಗತಿ ಕೃಷ್ಣ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಹರಿಪ್ರಸಾದ್ ಅವರು ಬ್ಯಾಂಕಿನ ಸಾಲ ಸೌಲಭ್ಯದ ಕುರಿತು ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಂ. ವಿ. ರವಿ ಅವರು ಸಮಗ್ರ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರಿಂದ ರೈತರು ಹೆಚ್ಚಿನ ಆರ್ಥಿಕ ಲಾಭವನ್ನು ಗಳಿಸಬಹುದೆಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು. ಕಾರ್ಯಕ್ರಮದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಕುಮಾರಿ ನಾಗರತ್ನ ಹಾಗೂ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ ಬಸವರಾಜ್, ಸದಸ್ಯರುಗಳಾದ ಶ್ರೀ ಶಂಕರಪ್ಪ, ಶ್ರೀ ಅಮರೇಗೌಡ, ಶ್ರೀ ದುರ್ಗಪ್ಪ ಮತ್ತು ಪ್ರಗತಿ ಪರ ರೈತರಾದ ಶ್ರೀ ಶರಣಗೌಡ ಪಾಟೀಲ್, ಶ್ರೀ ಅಮರೇಶ್ ಕೋಚೆ ಹಾಗೂ ಜಕ್ಕಲದಿನ್ನಿ ಗ್ರಾಮಸ್ಥರು ಭಾಗವಹಿಸಿದ್ದರು.



"ರಾಜ್ಯ ಮಟ್ಟದ ಡಾ॥ ಜ.ಕೆ. ವೀರೇಶ್ ಎಂಡೋಮೆಂಟ್ ಪ್ರಶಸ್ತಿ" ಹಿನ್ನೆಲೆಯಲ್ಲಿ "ಸಮಗ್ರ ಕೃಷಿ ಪದ್ಧತಿಯ ಕ್ಷೇತ್ರೋತ್ಸವ"

ಅಲುಮ್ನಿ ಅಸೋಸಿಯೇಷನ್, ಬೆಂಗಳೂರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ವಿಸ್ತರಣಾ ನಿರ್ದೇಶನಾಲಯ, ರಾಯಚೂರು, ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ರಾಯಚೂರು, ತೋಟಗಾರಿಕೆ ಇಲಾಖೆ, ರಾಯಚೂರು ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ, ರಾಯಚೂರು ಇವರುಗಳ ಸಹಭಾಗಿತ್ವದೊಂದಿಗೆ "ರಾಜ್ಯ ಮಟ್ಟದ ಡಾ॥ ಜ.ಕೆ. ವೀರೇಶ್ ಎಂಡೋಮೆಂಟ್ ಪ್ರಶಸ್ತಿ" ಹಿನ್ನೆಲೆಯಲ್ಲಿ "ಸಮಗ್ರ ಕೃಷಿ ಪದ್ಧತಿಯ ಕ್ಷೇತ್ರೋತ್ಸವ"ವನ್ನು ದಿನಾಂಕ 08.09.2017 ರಂದು ರಾಯಚೂರು ತಾಲೂಕಿನ ಗಣಮೂರು ಗ್ರಾಮದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ನೇರವೇರಿಸಿ ಮಾತನಾಡಿದ ಡಾ. ಎಸ್. ಕೆ. ಮೇಟಿ, ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ರೈತರಿಗೆ ಕರೆ ನೀಡಿದರು. ಪ್ರಶಸ್ತಿ ಪಡೆದ ರೈತ ಶ್ರೀ ರಾಮಕೃಷ್ಣ ಶಾವಟಿ ಅವರನ್ನು ಅಭಿನಂದಿಸಿದರು. ಮುಖ್ಯ ಅತಿಥಿಗಳಾದ ಡಾ. ಡಿ. ರಾಜಗೋಪಾಲ್, ನಿವೃತ್ತ ಡೀನ್ (ಸ್ನಾತಕೋತ್ತರ ಶಿಕ್ಷಣ), ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ನಿವೃತ್ತ ಆಡಳಿತ ಮಂಡಳಿ ಸದಸ್ಯರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಅವರು ಮಾತನಾಡಿ ಪ್ರಸ್ತುತ ಪರಿಸ್ಥಿತಿಯಲ್ಲಿ ಸಮಗ್ರ ಕೃಷಿ ಪದ್ಧತಿಯಿಂದ ರೈತರ ಉದ್ಧಾರ ಸಾಧ್ಯ ಎಂದು ನುಡಿದರು. ಡಾ. ಡಿ. ಎಂ. ಚಂದರಗಿ, ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ), ಕೃಷಿ ವಿಶ್ವವಿದ್ಯಾಲಯ, ರಾಯಚೂರು ಮಾತನಾಡಿ ಶ್ರೀ ರಾಮಕೃಷ್ಣ ಶಾವಟಿಯವರು, ಕೃಷಿ ಡಿಪ್ಲೋಮಾ ಮಾಡಿದ್ದರಿಂದ ಅದರ ಜ್ಞಾನವನ್ನು ಕೃಷಿಯಲ್ಲಿ ಉಪಯೋಗಿಸಿ ಇತರ ರೈತರಿಗೆ ಮಾದರಿಯಾಗಿದ್ದಾರೆ ಎಂದರು. ಡಾ. ಬಸವೇಗೌಡ, ವಿಶೇಷ ಅಧಿಕಾರಿ (ಬೀಜ ಘಟಕ), ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಇವರು ಸಮಗ್ರ ಕೃಷಿ ಪದ್ಧತಿಯ ಭಾಗವಾಗಿ ಅಧಿಕ ಆದಾಯ ಗಳಿಸಲು ರೈತರು ಬೀಜೋತ್ಪಾದನೆಯನ್ನು ಕೈಗೊಳ್ಳಬೇಕೆಂದರು. ಶ್ರೀ ಎಸ್. ಎಮ್. ಸಿದ್ಧರೆಡ್ಡಿ, ಅಧ್ಯಕ್ಷರು, ಕೃಷಿ ತಂತ್ರಜ್ಞರ ಸಂಸ್ಥೆ, ರಾಯಚೂರು, ಅವರು ರೈತ ಶ್ರೀ ರಾಮಕೃಷ್ಣ ಶಾವಟಿ ಅವರಂತೆ ಸಮಗ್ರ ಕೃಷಿಯನ್ನು ಎಲ್ಲಾ ರೈತರು ಅಳವಡಿಸಿಕೊಂಡು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕೆಂದು ತಿಳಿಸಿದರು. ಡಾ. ಎ. ಆರ್. ಕುರುಬರ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ತೋಟಗಾರಿಕೆ ವಿಭಾಗ, ಕೃಷಿ ಮಹಾವಿದ್ಯಾಲಯ, ರಾಯಚೂರು ಇವರು ತಮ್ಮ ನಿರಂತರ ಸಂಪರ್ಕದಲ್ಲಿದ್ದ ರಂಗಪ್ಪನವರ ಸಾಧನೆ ಕಂಡು ತಮ್ಮಲ್ಲಿ ಸಾರ್ಥಕ ಭಾವನೆ ಮೂಡಿದೆ ಎಂದು ನುಡಿದರು. ಶ್ರೀ ಮಹೇಶ್, ತೋಟಗಾರಿಕೆ ಅಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, (ಜಿ.ಪಂ.) ರಾಯಚೂರು ಅವರು ಉಪಸ್ಥಿತರಿದ್ದರು. ಡಾ. ಎಂ. ವಿ. ರವಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಸ್ವಾಗತಿಸಿದರು ಮತ್ತು ಡಾ. ಅನುಪಮ ಸಿ., ವಿಜ್ಞಾನಿ (ಗೃಹ ವಿಜ್ಞಾನ) ವಂದಿಸಿದರು.




"ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ"ಪ್ರಾಯೋಗಿಕ ಯೋಜನೆ

ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿಯವರು ರೈತರೊಂದಿಗೆ ಸಂವಾದ ಕಾರ್ಯಕ್ರಮವನ್ನು ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ಜಕ್ಕಲದಿನ್ನಿ ಗ್ರಾಮದಲ್ಲಿ ದಿನಾಂಕ 19.07.2017 ರಂದು ಮಧ್ಯಾಹ್ನ 3-00 ಗಂಟೆಗೆ ನೆರವೇರಿಸಿದರು. ಈ ಸಂದರ್ಭದಲ್ಲಿ ಕಾರ್ಯಯೋಜನೆಯ ಅನುಷ್ಠಾನಕ್ಕೆ ಅನುಕೂಲವಾಗುವ ಸಲುವಾಗಿ ಆಯೋಗದ ಕಛೇರಿಯೊಂದನ್ನು ಜಕ್ಕಲದಿನ್ನಿ ಗ್ರಾಮದಲ್ಲಿ ಉದ್ಘಾಟಿಸಿ, ಕೃಷಿಯಲ್ಲಿ ರೈತರಿಗೆ ಅಭಿವೃದ್ಧಿಯನ್ನು ಹೊಂದಲು ಬೇಕಿರುವುದು ಹಣಕ್ಕಿಂತ ಮುಖ್ಯವಾಗಿ ಕೃಷಿ ತಂತ್ರಜ್ಞಾನಗಳ ಅರಿವು ಎಂದು ತಿಳಿಸಿದರು. ಕೃಷಿ ಬೆಲೆ ಆಯೋಗದ "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಪ್ರಾಯೋಗಿಕ ಯೋಜನೆಯನ್ನು ಜಕ್ಕಲದಿನ್ನಿ ಗ್ರಾಮದಲ್ಲಿ ಏರ್ಪಡಿಸಿದ್ದು, ಕೃಷಿ ಸಂಬಂಧಿತ ಎಲ್ಲಾ ಇಲಾಖೆಗಳು ತಮ್ಮ ಕಾರ್ಯಕ್ರಮಗಳನ್ನು ಗ್ರಾಮದಲ್ಲಿ ಅಳವಡಿಕೆಯಾಗುವಂತೆ ಕ್ರಮವಹಿಸಲು ಕೃಷಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದರು. ಶ್ರೀ ಎಸ್. ಎಂ. ಸಿದ್ದರೆಡ್ಡಿ, ಉಪ ಕೃಷಿ ನಿರ್ದೇಶಕರು (ನಿವೃತ್ತ) ಕಾರ್ಯಕ್ರಮದಲ್ಲಿ ಪಾಲ್ಗೊಂಡು ಈ ಭಾಗದ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಸುತ್ತ ರೈತಬಾಂಧವರು ಕಾರ್ಯ ಯೋಜನೆಯಡಿಯಲ್ಲಿ ತಂತ್ರಜ್ಞಾನಗಳ ಮಾಹಿತಿಯನ್ನು ಪಡೆದು ಅನುಕೂಲ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು. ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಯ ತಂತ್ರಜ್ಞರಾದ ಡಾ. ರಾಮಸ್ವಾಮಿಯವರು ಯಾವುದೇ ಕ್ಷೇತ್ರದಲ್ಲಿ ಶ್ರದ್ಧೆಯಿಂದ ಕೆಲಸ ಮಾಡಿದರೆ ಸಾಫಲ್ಯವನ್ನು ಪಡೆಯಬಹುದೆಂದು ಕಿವಿಮಾತು ಹೇಳಿದರು. ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣವನ್ನು ಕಾರ್ಯಯೋಜನೆಯ ರೂವಾರಿ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಂ. ವಿ. ರವಿಯವರು ಮಾಡಿದರು. ಕೃಷಿ ಸಂಬಂಧಿತ ಇಲಾಖೆಯ ಸಹಾಯಕ ನಿರ್ದೇಶಕರುಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಪಾರ್ಥೇನಿಯಂ ನಿರ್ಮೂಲನಾ ದಿನಾಚರಣೆ

ದಿನಾಂಕ 04.08.2017 ರಂದು ಕೃಷಿ ವಿಜ್ಞಾನ ಕೇಂದ್ರ ರಾಯಚೂರಿನಲ್ಲಿ ಪಾರ್ಥೇನಿಯಂ ನಿರ್ಮೂಲನಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಪಾರ್ಥೇನಿಯಂನ್ನು ಗಜ್ಜರಿ ಕಸ, ವಿಷಕಸ ಎಂಬುದಾಗಿ ಕರೆಯುತ್ತಾರೆ. ಇದರ ಮೂಲ ಸ್ಥಾನ ಮೆಕ್ಸಿಕೊ ದೇಶ. 1955ರಲ್ಲಿ ಭಾರತಕ್ಕೆ ಗೋಧಿ ಆಮದಿನ ಸಂದರ್ಭದಲ್ಲಿ ಪ್ರವೇಶಿಸಲ್ಪಟ್ಟು ಇದುವರೆಗೆ 350 ಲಕ್ಷ ಹೆ. ಪ್ರದೇಶವನ್ನು ಆವರಿಸಿಕೊಂಡಿದೆ. ರೈಲು ಮಾರ್ಗಗಳು ಹಾಗೂ ರಸ್ತೆ ಬದಿಗಳಲ್ಲಿ, ಖಾಲಿ ಜಾಗಗಳಲ್ಲಿ, ಹಾಳು ಭೂಮಿಗಳಲ್ಲಿ, ಕಾರ್ಖಾನೆಗಳ ಸುತ್ತಮುತ್ತಲಿನ ಪ್ರದೇಶದಲ್ಲಿ, ಚರಂಡಿಗಳ ಹಾಗೂ ಕಾಲುವೆಗಳ ಬದಿಗಳಲ್ಲಿ, ತೋಟಗಳಲ್ಲಿ ಹಾಗೂ ಕಾಡು ಪ್ರದೇಶಗಳಲ್ಲಿ ಆವರಿಸಿಕೊಂಡಿದೆ. ಈ ಪಾರ್ಥೇನಿಯಂ ಕಸವು ಸರ್ವವ್ಯಾಪಿ ಯಾಗಿದ್ದು ಬೆಳೆಗಳಲ್ಲಿ ಹಾನಿ ಮಾಡುವುದಲ್ಲದೆ ಜನ ಹಾಗೂ ಜಾನುವಾರುಗಳಲ್ಲಿ ಅನೇಕ ರೋಗಗಳನ್ನು ಉಂಟು ಮಾಡುವುದರೊಂದಿಗೆ ಹೆಚ್ಚಿನ ಬೀಜೋತ್ಪಾದನೆ ಹಾಗೂ ಪ್ರಸರಣಗೊಳ್ಳುವ ಸಾಮರ್ಥ್ಯವು ಅಧಿಕವಾಗಿರುವುದರಿಂದ ಜೀವ ವೈವಿಧ್ಯತೆಗೆ ದಕ್ಕೆಯನ್ನುಂಟು ಮಾಡುವುದರಿಂದ ಬೇರೆ ಕಳೆಗಳಿಗೆ ಹೋಲಿಸಿದರೆ ಇದರ ತೊಂದರೆ ಸಾಕಷ್ಟು. ಈ ಉದ್ದೇಶದಿಂದ ಇದರ ಜಾಗೃತಿ ಹಾಗೂ ನಿರ್ಮೂಲನೆ ಮಹತ್ವವನ್ನು ಮತ್ತು ಮಾಹಿತಿಯನ್ನು ಕಾರ್ಯಕ್ರಮದ ರೂವಾರಿ ಹಾಗೂ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಡಾ. ಎಂ.ವಿ. ರವಿಯವರು ನೀಡಿದರು. ಶ್ರೀಮತಿ ಬಿ. ಎನ್. ಶ್ವೇತಾ, ವಿಜ್ಞಾನಿ (ಬೇಸಾಯ ಶಾಸ್ತ್ರ) ಇವರು ಪಾರ್ಥೇನಿಯಂ ಕಾಂಶೋಸ್ಟ್ ಮಾಡುವುದರ ಮೂಲಕ ನಿರ್ವಹಣೆಯನ್ನು ಮಾಡಬಹುದೆಂದು ತಿಳಿಸಿದರು. ಶ್ರೀ ಪಿ. ಆರ್. ಬದರಿ ಪ್ರಸಾದ್ ವಿಜ್ಞಾನಿ (ಕೃಷಿ ಕೀ